ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು :

ಅ) ಆ) ಇ) ಮತ್ತು ಈ)

ಬೀದರ್‌ನಲ್ಲಿರುವ ರಕ್ಷಣಾ ಮಂತ್ರಾಲಯದ ವಿಮಾನ ನಿಲ್ದಾಣದಲ್ಲಿ ನಾಗಾರೀಕ ವಿಮಾನಯಾನ ಸೇವೆ ಪ್ರಾರಂಭಿಸಲು ರಕ್ಷಣಾ ಮಂತ್ರಾಲಯದಿಂದ ತಾತ್ಪೂರ್ತಿಕ ಅನುಮತಿ ನೀಡಲಾಗಿದ್ದು ಈ ಸೇವೆಗಾಗಿ ಒಂದು ಹೊಸ ತಾತ್ಕಾಲಿಕ ಟರ್ಮಿನಲ್ ಕಟ್ಟಡವನ್ನು ರಾಜ್ಯ ಸರ್ಕಾರದ ಅನುದಾನದ ಮುಖೇನ ಜಿಲ್ಲಾಧಿಕಾರಿಗಳು, ಬೀದರ್ ಇವರು ಈಗಾಗಲೇ ನಿರ್ಮಿಸಿರುತ್ತಾರೆ. ಆದರೆ ಇದರ ನಿರ್ವಹಣೆ ಹಾಗೂ ನಾಗಾರೀಕ ವಿಮಾನಯಾನ ಸೇವೆಯನ್ನು ಪ್ರಾರಂಭಿಸಲು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವನ್ನು ಕೋರಲಾಗಿದೆ. ಸಧ್ಯ ಆರ್ಥಿಕ ಹಿಂಜರಿತದ ಕಾರಣ ಸಾಧ್ಯವಿರುವುದಿಲ್ಲವೆಂದು ಅವರಿಂದ ಅಭಿಪ್ರಾಯ ವ್ಯಕ್ತಗೊಂಡಿದ್ದು, ಆದರೂ ಕೂಡ ನಾಗರೀಕ ವಿಮಾನಯಾನ ಮಂತ್ರಾಲಯ ಭಾರತ ಸರ್ಕಾರವನ್ನು ಒತ್ತಾಯಿಸಲಾಗಿದೆ ಹಾಗೂ ಉತ್ತರ ನಿರೀಕ್ಷಿಲಾಗುತ್ತಿದೆ.

748 ಶ್ರೀ ರಾಜಶೇಖರ ಬಸವರಾಜ ಪಾಟೀಲ್ (ಹುಮ್ನಾಬಾದ್) : ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಮ್ನಾಬಾದ್ ಮತ ಕ್ಷೇತ್ರದಲ್ಲಿ ಯಾವ ಯಾವ ಪಟ್ಟಣಗಳಿಗೆ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯಿಂದ ಶಾಶ್ವತವಾಗಿ ಕಾರಂಜಾ ಜಲಾಶಯದಿಂದ ಸಮಗ್ರವಾದ ಕುಡಿಯುವ ನೀರಿನ ಸರಬರಾಜು ಯೋಜನೆಯನ್ನು ಜಾರಿಗೊಳಿಸಲಾಗಿದೆ;

ಆ) ಈ ಯೋಜನೆಗಳನ್ನು ಎಂದಿನಿಂದ ಜಾರಿಗೊಳಿಸಲಾಗಿದೆ; ಈ ಯೋಜನೆಗಳ ಅಂದಾಜುವೆಚ್ಚವೆಷ್ಟು; ಇಲ್ಲಿಯವರೆಗೆ ಈ ಯೋಜನೆಗಳ ಅನುಷ್ಠಾನಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ;

ಇ) ಈ ಯೋಜನೆಗಳು ಈಗ ಯಾವ ಹಂತದಲ್ಲಿದೆ (ಯೋಜನಾವಾರು ವಿವರಗಳನ್ನು ಒದಗಿಸುವುದು);

ಈ) ನಿಯಮಾನುಸಾರ ಈ ಯೋಜನೆಗಳು ಎಂದು ಪೂರ್ಣವಾಗ ಬೇಕಾಗಿತ್ತು;

ಉ) ಈ ಯೋಜನೆಗಳು ಮಂದಗತಿಯಲ್ಲಿ ಸಾಗುತ್ತಿರುವುದಕ್ಕೆ ಕಾರಣಗಳೇನು;

ಊ) ಸಾರ್ವಜನಿಕ ಹಿತದೃಷ್ಟಿಯಿಂದ ಈ ಯೋಜನೆಗಳನ್ನು ತ್ವರಿತವಾಗಿ ಕಾರ್ಯಗತಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು; ಪ್ರಸಕ್ತ ಸಾಲಿನಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗುವುದು?

ಶ್ರೀ ಎಸ್.ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) :

ಅ) ಹುಮ್ನಾಬಾದ್ ಮತ ಕ್ಷೇತ್ರದಲ್ಲಿ ಹುಮ್ನಾಬಾದ್ ಮತ್ತು ಚಿಟಗುಪ್ಪ ಪಟ್ಟಣಗಳಿಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಶಾಶ್ವತವಾಗಿ ಕಾರಂಜಾ ಜಲಾಶಯದಿಂದ ಸಮಗ್ರವಾದ ನೀರು ಸರಬರಾಜು ಯೋಜನೆಯನ್ನು ಚಾಲನೆಗೊಳಿಸಲಾಗಿದೆ.

ಆ) ಹುಮ್ನಾಬಾದ್–ಚಿಟಗುಪ್ಪ ಪಟ್ಟಣಗಳು ಹಾಗೂ ಮಾರ್ಗ ಮಧ್ಯದ 10 ಹಳ್ಳಿಗಳಿಗೆ ಕಾರಂಜಾ ಜಲಾಶಯವನ್ನು ಮೂಲವನ್ನಾಗಿಟ್ಟು ಕೊಂಡು ಶಾಶ್ವತ ನೀರು ಪೂರೈಸುವ ಯೋಜನೆಯನ್ನು ಹುಮ್ನಾಬಾದ ಮತ್ತು ಚಿಟಗುಪ್ಪ ಪಟ್ಟಣಗಳಿಗೆ ಕ್ರಮವಾಗಿ 24–11–2008 ಮತ್ತು 31–03–2009ರಂದು ಚಾಲನೆಗೊಳಿಸಲಾಗಿದೆ.

ಯೋಜನೆಯ ಅಂದಾಜು ವೆಚ್ಚ : ರೂ.1904.00 ಲಕ್ಷಗಳು.

ಈವರೆಗಿನ ಯೋಜನೆಯ ಒಟ್ಟುವೆಚ್ಚ : ರೂ.2548.61 ಲಕ್ಷಗಳು.

ಇ) ಈ ಯೋಜನೆಗಳನ್ನು ಚಾಲನೆಗೊಳಿಸಲಾಗಿದೆ.

ಈ) ಟೆಂಡರ್ ನಿಯಮಾನುಸಾರ ಈ ಯೋಜನೆಯು ಫೆಬ್ರವರಿ 2008ರಲ್ಲಿ ಪೂರ್ಣಗೊಳ್ಳಬೇಕಾಗಿತ್ತು.

ಉ) ಈ ಯೋಜನೆಗಳು ಮಂದಗತಿಯಲ್ಲಿ ಸಾಗುತ್ತಿದ್ದುದಕ್ಕೆ ಕಾರಣಗಳು :–

1. ಕಾರಂಜಾ ಜಲಾಶಯದಿಂದ ನೀರನ್ನು ಎತ್ತಲು ಕರ್ನಾಟಕ ನೀರಾವರಿ ನಿಗಮದಿಂದ ಅನುಮತಿ ನೀಡುವಲ್ಲಾದ ವಿಳಂಬ.
2. ನೆಲ ಮಟ್ಟದ ಜಲಸಂಗ್ರಹಾಗಾರ ಮತ್ತು ಜಲ ಶುದ್ಧೀಕರಣ ಘಟಕ ನಿರ್ಮಾಣಕ್ಕೆ ಅವಶ್ಯವಿರುವ ಭೂಮಿಯನ್ನು ಅರಣ್ಯ ಇಲಾಖೆಯಿಂದ ಮಂಡಳಿಗೆ ಹಸ್ತಾಂತರಿಸಲು ವಿಳಂಬ.
3. ಕಾಮಗಾರಿ ಸ್ಥಳ ಮತ್ತು ಕೊಳವೆ ಮಾರ್ಗ ಅಳವಡಿಸುವಾಗ ಕೆಲವು ಹಳ್ಳಿಯ ಜನರಿಂದ ಉಂಟಾದ ಅಡಚಣೆ ಮತ್ತು ತಕರಾರು.

ಊ) ಯೋಜನೆಗಳನ್ನು ಈಗಾಗಲೇ ಕಾರ್ಯಗತಗೊಳಿಸಲಾಗಿದೆ.